ಕಂಡು ಬಂದೆ. ವರ್ಷದ ಒಳಗೆ ಅಪ್ಪನಿದ್ದ ತಾಲ್ಲೂಕಿಗೆ ನನ್ನ ವರ್ಗವಾಯಿತು. ಅಪ್ಪ-ಅಮ್ಮನ ಮನೆಗೆ ಬಂದು ಸೇರಿದೆ. ಆ ಸಮಯದಾಗೇ ಅಪ್ಪನಿಗೂ ದೊಡ್ಡಪ್ಪನಿಗೂ ಆಸ್ತಿ ವಿಚಾರದಲ್ಲಿ ಜಗಳ ನಡೆದಿತ್ತು. ಅದು ನನ್ನ ಅಷ್ಟಾಗಿ ಗಮನಕ್ಕೆ ಬರಲಿಲ್ಲ. ವಿಚಿತ್ರವೆಂದರೆ ಅಪ್ಪನ ಆಪ್ತರೂ, ಶಿಕ್ಷಣ ಇಲಾಖೆಯಲ್ಲಿದ್ದ ಅವರ ಹೆಸರು ಶಿವಶಂಕರ್ ಒಮ್ಮೆ ನಮ್ಮ ಮನೆಗೆ ಬಂದರು. ಜತೆಗೆ ಅವರ ಮಗನಿದ್ದ. ಬ್ಯಾಂಕ್ ಉದ್ಯೋಗಿ. ಒಂದು ಕೆಲ್ಸದ ನಿಮ್ಮಿತ್ತ ಬರುತ್ತೇವೆಂದು ತಿಳಿಸಿದ್ದರಿಂದ ಅಪ್ಪ ಮನೆಗೇ ಬರಲು ಒತ್ತಾಯಿಸಿದ್ದರಿಂದ ಬಂದಿದ್ದರು. ಒಂದು ರಾತ್ರಿ ತಂಗಿದ್ದರು. ನನ್ನ ವರ್ಗಾವಣೆ ಮಾಡಿಸಿದ್ದವರೂ ಅವರೆ ಆಗಿದ್ದರಿಂದ ನಾನು ಗೌರವದಿಂದ ಉಪಚರಿಸಿದೆ. ಅಂದೇ ಅಪ್ಪನಿಗೆ ನನ್ನ ವರ್ಗಾವಣೆ ವಿಷಯ ಹೇಳಿದೆ. 'ಆ ಕಾರಣದಿಂದ ಇಷ್ಟು ಉಪಚಾರ ಮಾಡುತ್ತಿದ್ದೇನು? ಶಿವಶಂಕರ್ ಅವರ ಪುಣ್ಯ' ಎಂದರು. ಅವರ ಮಗ ಅರವಿಂದನೂ ಮುಕ್ತವಾಗಿ ನನ್ನ ಜತೆ ಮಾತಾಡುತ್ತಿದ್ದ. ನನ್ನ ಮನಸ್ಸಿನಲ್ಲಿ ನಿಂತ. ಮುಂದೆ ಅಪ್ಪ. ಅಮ್ಮನ ಮುಂದೆ ತಿಳಿಸಿದೆ. ಶಿವಶಂಕರ ಸರ್‌ಗೆ ನಾನೇ ಹೇಳಿದೆ. 'ನಾನು, ನನ್ನ ಮಗ ಪುಣ್ಯ ಮಾಡಿದ್ದೀವಿ. ಅದ್ರೂ ನಮ್ಮ ಅರವಿಂದನ ಜತೆ ಮಾತಾಡ್ರಿ' ಎಂದರು. ಅಪ್ಪ ಎಂದಿನಂತೆ ಉತ್ಸಾಹವನ್ನು ತೋರಿಸಲಿಲ್ಲ. ನಿರುತ್ಸಾಹವನ್ನೂ ತೋರಿಸಲಿಲ್ಲ. 'ನಿನ್ನ-ಅರವಿಂದನ ಒಪ್ಪಂದ ಇದ್ರೆ ಸಾಕು. ನಾವು ನಿಮಿತ್ತ' ಎಂದ. ಮದುವೆ ಆಯ್ತು. ಆರು ತಿಂಗಳಲ್ಲಿ ಅರವಿಂದನ ವರ್ಗಾವಣೆ ನಾವಿರುವ ತಾಲ್ಲೂಕಿಗೇ ಆಯಿತು. ನಾವು ಬೇರೆ ಮನೆ ಮಾಡಿದೆವು.

ಅರವಿಂದ ಒಳ್ಳೆಯ ಉದ್ಯೋಗಿ ಎಂದು ಬ್ಯಾಂಕಿನಲ್ಲಿ ಗುರುತಿಸಿಕೊಂಡಿದ್ದ. ನಾನು ಕಾಲೇಜಿನಲ್ಲಿ ಕ್ಲಾಸ್‌ಗಳು ಮುಗಿದರೆ ಮನೆಗೆ ಬರುತ್ತಿದ್ದೆ. ನ್ಯಾಕ್ ಕೆಲ್ಸಗಳಿದ್ದರೆ ಮಾಡಿ ಸಂಜೆ ಐದಕ್ಕೆ ಮನೆಗೆ ಬರುತ್ತಿದ್ದೆ. ಅರವಿಂದ ರಾತ್ರಿ ಎಂಟಕ್ಕೆ ಬರುತ್ತಿದ್ದ. ಅದು ಚೂರು ನನ್ನ ಬೇಸರವಾಗುತ್ತಿತ್ತು. ಬ್ಯಾಂಕಿನಲ್ಲಿ ಅನೇಕರ ಕೆಲ್ಸ ಎಂಟಕ್ಕೆ ಮುಗಿಯುತ್ತಿತ್ತು. ಸಂಸಾರದ ಜತೆಗೆ ಹೊಸ ಮನೆ ಕಟ್ಟಿಸಿದೆವು. ಮೂರು ವರ್ಷಗಳಾಗುತ್ತ ಬಂತು. ಮಕ್ಕಳ ಭಾಗ್ಯ ಬರಲಿಲ್ಲ. ಇದು ನನ್ನ ಅಷ್ಟು ಚಿಂತೆಯಾಗಿದ್ದಿಲ್ಲ. ಅರವಿಂದ ನಾಟಕ ನಿರ್ದೇಶಕನಾಗಿದ್ದ. ಇಲ್ಲಿಗೆ ಬಂದ ಮ್ಯಾಲೆ ರಂಗ ಆಸಕ್ತರು ಸೇರಿ ಅರವಿಂದನನ್ನು ಇನ್ವಾಲ್ವ್ ಮಾಡಿಕೊಂಡರು. ರಂಗಚಟುವಟಿಕೆಗಳಿದ್ದರೆ ರಾತ್ರಿ ಹತ್ತಕ್ಕೆ ಮನೆಗೆ ಬರುತ್ತಿದ್ದ. ಇದು ನನ್ಗೆ ತಲೆನೋವು ತಂದಿತ್ತು. 'ಇದು ನನ್ನ ಹವ್ಯಾಸ. ಈ ಊರಲ್ಲಿ ರಂಗಕಲಾವಿದರೂ ತುಂಬಾ ಆಸಕ್ತಿ ಇದ್ದವರು ಸಿಕ್ಕಿದ್ದಾರೆ. ನಾಟಕ ನಿರ್ದೇಶನ ಮಾಡ್ತೀನಿ. ಬೇಗ ಮನಿಗೆ ಒಂದು ಏನು ಮಾಡ್ಲಿ? ಮುಂಜಾನೆ ಒಂಬತ್ತುವರೆವರೆಗೆ ಬರ್ತೀನಿ. ರಾತ್ರಿ ತಡವಾಗುವುದು ರಿಹರ್ಸಲ್ ಇದ್ದಾಗ ಮಾತ್ರ' ಎಂದು ಸ್ವಲ್ಪ ತಿಳಿ ಹೇಳಿದಂತೆ, ಸ್ವಲ್ಪ ದೃಢವಾಗಿ ಹೇಳಿದ. ಅಪ್ಪ-ಅಮ್ಮನನ್ನು ತಾನು ನಿರ್ದೇಶಿಸಿದ ನಾಟಕಗಳಿಗೆ ಕರೆದು ತೋರಿಸಿದ. ನಾನೂ ಹೋಗುತ್ತಿದ್ದೆ. ನಾಟಕದಲ್ಲಿ ಮಹಿಳಾ ಕಲಾವಿದರು ಇದ್ದರು. ಇದು ಕಾಡಲು ಶುರುವಾಯ್ತು. 'ಮಹಿಳಾ ಕಲಾವಿದರ ದಂಡೆ ಐತೆ ನಿಮ್ಮ ನಾಟಕಗಳಲ್ಲಿ' ಎಂದು ವ್ಯಂಗ್ಯ ಮಾಡಿದೆ. 'ನೀನೂ ಬಾ, ನಟನೆಗೆ ಇಳಿ. ಇದು ಇಬ್ಬರ ಹವ್ಯಾಸವಾದ್ರೆ ಉತ್ಸಾಹ ಹೆಚ್ಚಾಗ್ತದ' ಅಂದ.

ಬರುಬರುತ್ತ ನಾಟಕ ಪ್ರದರ್ಶನಗಳು ದೆಹಲಿ, ಕಲ್ಕತ್ತ, ಚೆನ್ನೈ, ಹೈದ್ರಾಬಾದ್, ಮುಂಬೈ ನಗರಗಳಲ್ಲಿ ನಡೆದು ಅರವಿಂದ ವಾರಗಟ್ಟಲೇ ಹೋಗುತ್ತಿದ್ದ. ಮಹಿಳಾ ಕಲಾವಿದರ ಜತೆಗೆ ಹೋಗುತ್ತಿದ್ದುದು ಅನಿವಾರ್ಯವಾಯ್ತು. ಅದ್ಯಾಕೋ ನನ್ಗ ಸರಿ ಬರಲಿಲ್ಲ. ಮಾಮ ಶಿವಶಂಕರ್ ಅವರಿಗೆ ಹೇಳಿದೆ. 'ಹೌದು. ನಾಟಕ ಹುಚ್ಚು ಅವನಿಗಿದೆ. ಆದ್ರೆ ನೀವು ದಂಪತಿಗಳು ತಾಳ್ಮೆಯಿಂದ ಕುಂತು ಮಾತಾಡಿ. ನಿಮ್ಮ ನಿಮ್ಮ ನಿಯಂತ್ರಣದಲ್ಲಿರಿ' ಎಂದು ಹೇಳಿದರು. ಅಪ್ಪನಿಗೆ ಹೆದರಿಕೊಂಡೇ ಹೇಳಿದೆ. 'ನಮ್ಮದನ್ನು ನಾವೇ ತೊಳೆದುಕೊಳ್ಳಬೇಕು!' ಎಂದು ಬಿಟ್ಟ. ದಿನ ಕಳೆದಂತೆ ಅರವಿಂದನೇನೋ ನಾರ್ಮಲ್ ಆಗಿದ್ದ. ನಾನೇ ಅಬ್‌ನಾರ್ಮಲ್ ಆಗಿದ್ದೆ. ನನ್ನ ಗೆಳತಿ ಮಮತಾಳನ್ನು ಈ ಬಗ್ಗೆ ಕೇಳಿದೆ. ನಾಟಕ, ಸಿನಿಮಾ, ಧಾರವಾಹಿಗಳ ಕಲಾವಿದರು ಅಂದ್ರೆ ಅಷ್ಟೇ ಮುಕ್ತವಾಗಿರ್ತಾರ. ನೀನು ಅರ್ಥಮಾಡಿಕೊಂಡು ತಣ್ಣಗಿರು' ಅಂದಳು. ನನ್ನ ಮ್ಯಾಲೆ ನನ್ಗೆ ನಿಯಂತ್ರಣ ತಪ್ಪಿತು. ಡೈವೋರ್ಸ್ ಅರ್ಜಿ ಹಾಕಿದೆ. ಹಗ್ಗ ಜಗ್ಗಾಟವಾಯ್ತು! ಕೊನೆಗೆ ವರ್ಷದ ಒಳಗೇ ಡೈವೋರ್ಸ್ ಸಿಕ್ಕಿತು! ಅಪ್ಪ ಕೆಂಡಾಮಂಡಲವಾದರು! ಅಮ್ಮ ಕಣ್ಣೀರು ಹಾಕಿದಳು! ನಾನೇ ತಪ್ಪಿತಸ್ಥಳಾದಂತೆ ಕಂಡಿತು. ಶಿವಶಂಕರ್ ಬಂದು, 'ನಿಮ್ಮ ಮಗಳು ಇಂಥವಳು ಅಂತ ತಿಳಿಯಲಿಲ್ಲ. ನಾವು ಎಡವಿದೆವು'